VIJAYAKUMAR KANNUR
Digitally signed by VIJAYAKUMAR KANNUR
Date: 2026.03.10 11:02:43 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 07.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀ ಬಿ ಆರ್ ಡಿ ವಕೀಲರಿಂದ :**

ನನ್ನ ತಂದೆಗೆ ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಗಂಡು ಮಗ. ಅವರೇಂದರೆ ನಾನು ಮತ್ತು ಕಸ್ತೂರಿ, ಗಂಡು ಮಗನ ಹೆಸರು ಮಲ್ಲಪ್ಪ. ಅರ್ಜಿದಾರರು ಈ ಪ್ರಕರಣಕ್ಕೆ ಸಂಬಂಧಪಟ್ಟಂತಹ ಆಸ್ತಿಗಳಿಗೆ ಸಂಬಂಧಪಟ್ಟಂತೆ ದಾಖಲು ಮಾಡಿರುವ ಅಸಲು ದಾವಾ ನಂ. 31/2007 ರ ದಾವೆಯ ಸಮಯದಲ್ಲಿ ಈ ಆಸ್ತಿಗಳು ನನ್ನ ಸಹೋದರನಾದ ಮಲ್ಲಪ್ಪನ ಹೆಸರಿನಲ್ಲಿ ಇದ್ದವು ಎಂದರೆ ಸರಿ. ನನ್ನ ತಂದೆ ಬಸಪ್ಪ ಮೃತ ಪಟ್ಟ ನತಂರ ವಾರಸಾನಾತೆಯಿಂದ ನನ್ನ, ನನ್ನ ಸಹೋದರಿ ಮತ್ತು ನನ್ನ ಸಹೋದರ ಹೆಸರುಗಳು ಪಹಣಿ ಪತ್ರಿಕೆಯಲ್ಲಿ ದಾಖಲಾಗಿದ್ದವು ಎಂದರೆ ಸರಿ. ಆ ಸಮಯದಲ್ಲಿ ನನ್ನ ತಾಯಿ ಶಿವವ್ವಳ ಹೆಸರು ಸಹ ದಾಖಲಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ನನ್ನ ತಂದೆಗೆ ಒಬ್ಬನೇ ಗಂಡು ಮಗ ಮಲ್ಲಪ್ಪ ಎಂದು ಇರುವುದಾಗಿ ಎಂದು ಹೇಳಿ ಆತನ ಹೆಸರು ದಾಖಲು ಮಾಡಲು ನಾವು ವರದಿ ನೀಡಿದ್ದೇವೆ ಎಂದರೆ ಸರಿ. ಆ ಪ್ರಕಾರ ಡ ನಂಬರ 4352 ರ 1989 ರಲ್ಲಿ ಹಕ್ಕು ಮಂಜೂರಾಗಿರುವುದು ಎಂದರೆ ಸರಿ. ಈ ಕಾರಣಕ್ಕಾಗಿ ದಾವಾ ಆಸ್ತಿಗಳಲ್ಲಿ ಪಹಣಿ ಪತ್ರಿಕೆಗಳಲ್ಲಿ ನನ್ನ ಮತ್ತು ನನ್ನ ತಾಯಿಯ ಹೆಸರು ದಾಖಲಾಗಿರುವುದಿಲ್ಲ ಎಂದರೆ ಸರಿ.

2. ನನ್ನ ತಾಯಿ ಶಿವವ್ವ ಮೃತ ಪಟ್ಟಿರುವಳು ಎಂದರೆ ಸರಿ. ನನ್ನ ಸಹೋದರಿ ಕಸ್ತೂರಿ ಜೀವಂತವಾಗಿರುವಳು ಎಂದರೆ ಸರಿ. ಕಸ್ತೂರಿ ಇವತ್ತಿನವರೆಗೂ ಈ ಮಲ್ಲಪ್ಪನ ಹೆಸರಿನಲ್ಲಿ ಇರುವ ಆಸ್ತಿಗಳಲ್ಲಿ ತನ್ನದು ಪಾಲು ಇರುವುದಾಗಿ ಎಂದು ಹೇಳಿ ಅವಳು ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಎಂದರೆ ಸರಿ. ಈ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಅಸಲು ದಾವಾ ನಂ. 223/2021 ರ ದಾವೆ ದಾಖಲು ಮಾಡಿದ್ದೇನೆ ಎಂದರೆ ಸರಿ. ಈ ದಾವೆಯು ಸರ್ವೇ ನಂಬರ್ 386/4 ವಿಸ್ತೀರ್ಣ 3 ಎಕರೆ ಜಮೀನಿಗೆ ಸಂಬಂಧಪಟ್ಟಿರುವುದು ಎಂದರೆ ಸರಿ. ಇನ್ನುಳಿದ

ಎರಡು ಜಮೀನುಗಳನ್ನು ಮತ್ತು ಒಂದು ಮನೆಯನ್ನು ನನ್ನ ಸಹೋದರ ಮಲ್ಲಪ್ಪ ಪಾಯಗೊಂಡ ಎಂಬ ಮನೆತನಕ್ಕೆ ಮತ್ತು ಅಡ್ಡಿ ಎಂಬ ಮನೆತನಕ್ಕೆ ಮಾರಾಟ ಮಾಡಿರುವನು ಎಂದರೆ ಸರಿ. ಈ ಮಾರಾಟ ಮಾಡಿರುವ ಪ್ರಕ್ರಿಯೆಯನ್ನು ನಾವು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಅರ್ಜಿದಾರರು ಈ ದಾವೆಯನ್ನು 2007 ರಲ್ಲಿ ದಾಖಲು ಮಾಡಿದ ಬಗ್ಗೆ ನಮಗೆ ಮಾಹಿತಿ ಇರಲಿಲ್ಲ. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಮಲ್ಲಪ್ಪನಿಗೆ ಮೊದಲನೇಯ ಹೆಂಡತಿಯಾದ ಮಹಾದೇವಿಯಿಂದ ವಿಜಯಲಕ್ಷ್ಮೀ ಮತ್ತು ರಾಚಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಅಸಲು ದಾವಾ ನಂ. 31/2007 ರ ಪ್ರಾರ್ಥಮಿಕ ಡಿಕ್ರಿಯ ಪ್ರಕಾರ ಮಲ್ಲಪ್ಪ ಮತ್ತು ರಾಚಪ್ಪನಿಗೆ ಅರ್ಧ ಹಿಸ್ಸೆ, ವಿಜಯಲಕ್ಷ್ಮೀ ಮತ್ತು ಮಹಾದೇವಿಗೆ ಅರ್ಧ ಹಿಸ್ಸೆ ನೀಡಿರುವರು ಎಂದರೆ ಸರಿ, ಆದರೆ ನಮ್ಮ ತಂದೆಯ ಆಸ್ತಿಯಲ್ಲಿ ನವಗೂ ಪಾಲು ಇರುವುದು ಎಂದು ಸಾಕ್ಷಿ ಉತ್ತರಿಸುವರು. 1989 ರಲ್ಲಿ ದಾವಾ ಆಸ್ತಿಯಲ್ಲಿ ನನ್ನ ಹಕ್ಕು ನಷ್ಟವಾಗಿರುವುದರಿಂದ ನಮಗೆ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಮಲ್ಲಪ್ಪನಿಗೆ ಹಕ್ಕು ಬಿಟ್ಟುಕೊಟ್ಟ ಕಂದಾಯದ ಆದೇಶವು ತಪ್ಪು ಇರುವುದಾಗಿ ಎಂದು ಅಸಲು ದಾವಾ ನಂ. 223/2021 ರ ದಾವೆ ಮಾಡುವ ಪೂರ್ವದಲ್ಲಿ ಮತ್ತು ಈ ಪ್ರಕರಣದಲ್ಲಿ ನಾನು ಸೆರ್ಪಡೆಯಾಗುವ ಪೂರ್ವದಲ್ಲಿ ನಾನು ಪ್ರಶ್ನಿಸಿರುವುದಿಲ್ಲ.

4. ಅರ್ಜಿದಾರರು ನನ್ನ ಸಹೋದರ ಮಲ್ಲಪ್ಪನಿಗೆ ಬಂದಿರುವ ಆಸ್ತಿಗಳಲ್ಲಿ ಅವರು ಪಾಲು ವಿಭಾಗ ಕೋರಿ ದಾವೆ ದಾಖಲು ಮಾಡಿರುವರು ಎಂದರೆ ಸರಿ. ಈ ಕಾರಣಕ್ಕೆ ನ್ಯಾಯಾಲಯದವರು ಮಾಡಿರುವ ಪ್ರಾರ್ಥಮಿಕ ಡಿಕ್ರಿಯು ನಿಜವಿರುವುದು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ನನ್ನ ಸಹೋದರ ಮಲ್ಲಪ್ಪ ಈ ಮೊದಲಿನ ಎರಡು ಆಸ್ತಿಗಳು ಮತ್ತು ಮನೆಯನ್ನು ಮಾರಾಟ ಮಾಡಿ ನಂತರ ಉಳಿದಂತಹ ಆಸ್ತಿಗಳನ್ನು ಮಾರಾಟ ಮಾಡಬಾರದು ಎಂಬ ಉದ್ದೇಶದಿಂದ ಈ ಅರ್ಜಿ ದಾಖಲು ಮಾಡಿರುವೆನು.

5. ನಾನು ಸಲ್ಲಿಸಿದ ಅರ್ಜಿಯು ಯಾವ ಭಾಷೆಯಲ್ಲಿ ಇರುವುದು ನನಗೆ ಗೊತ್ತಿರುವುದಿಲ್ಲ. ಅದರಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ, ಏಕೆಂದರೆ ನಾನು ಶಾಲೆ ಕಲಿತಿರುವುದಿಲ್ಲ. ಅರ್ಜಿದಾರರಿಗೆ ತೊಂದರೆ ನೀಡುವ ಸಲುವಾಗಿ ನಾನು

ಉದ್ದೇಶಪೂರಕವಾಗಿ ಈ ಮೊದಲು ಮಲ್ಲಪ್ಪನಿಂದ ಖರೀದಿ ಮಾಡಿರುವ ಜಮೀನು ಮತ್ತು ಮನೆಯ ಮಾಲೀಕರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಕಸ್ತೂರಿಗೆ ಹಕ್ಕು ಇರುವುದಿಲ್ಲ ಎಂಬ ಕಾರಣಕ್ಕೆ ಅವಳು ಈ ಪ್ರಕರಣದಲ್ಲಿ ಸೇರ್ಪಡೆಯಾಗಿರುವುದಿಲ್ಲ ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರದೇ ಇದ್ದರೂ ಸಹಿತ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ನಂ. 223/2021 ರ ದಾವೆಯಲ್ಲಿ ನನಗೆ ಸ್ವತಂತ್ರವಾಗಿ ಹಿಸ್ಸೆ ಪಡೆಯುವ ಅವಕಾಶ ಇದ್ದರೂ ಸಹಿತ ನಾನು ಈ ಅರ್ಜಿಯಲ್ಲಿ ವಿನಾಃ ಕಾರಣ ಪಕ್ಷಗಾರಳಾಗಿ ಸೇರ್ಪಡೆಯಾಗಿದ್ದೇನೆ ಅಂತ ಸೂಚಿಸುವುದು ಸರಿಯಲ್ಲ. ನಾನು ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಉಳಿದ ಎದುರಾರರ ಪರವಾಗಿ ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ